**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ನಂಜನಗೂಡು</u>**

**<u>ಸಿಸಿ ಸಂಖ್ಯೆ: 143/2026</u>**

**ಫಿರ್ಯಾದುದಾರರು** : ಸರ್ಕಾರದ ಪರವಾಗಿ ಆರಕ್ಷಕ ಉಪ-ನಿರೀಕ್ಷಕರು,
ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ,
ನಂಜನಗೂಡು.

ವಿರುದ್ಧ

**ಆರೋಪಿ** : ಶ್ರೀಮತಿ.ಪವಿತ್ರ ಎನ್

:: **<u>ಆಪಾದನೆ</u>** ::

**ಶ್ರೀ ಸತೀಶ. ಕೆ.ಜಿ. ಬಿ.ಎ., ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿಗಳಾದ.-**

ಶ್ರೀಮತಿ.ಪವಿತ್ರ ಎನ್ ಕೋಂ ಅನಿಲ್ ಕುಮಾರ್
ವಯಸ್ಸು ಸುಮಾರು 31 ವರ್ಷ,
ವಾಸಃ ಕೆ ಎಡತೊರೆ ಗ್ರಾಮ, ಹೆಚ್.ಡಿ. ಕೋಟೆ ತಾಲ್ಲೂಕು.
ಹಾಲಿ ವಾಸಃ ಉಪ್ಪಿನಹಳ್ಳಿ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

ನಿವಾಸಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ದಿನಾಂಕ 14.01.2026 ರಂದು ಮಧ್ಯಾಹ್ನ 12.20 ಗಂಟೆ ಸಮಯದಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಉಪ್ಪಿನಹಳ್ಳಿ ಗ್ರಾಮದ ಕನಕದಾಸರ ಬೀದಿಯಲ್ಲಿರುವ ನಿಂಗರಾಜುರವರ ಅಂಗಡಿಯ ಮುಂಭಾಗದ ಸಾರ್ವಜನಿಕ ರಸ್ತೆಯಲ್ಲಿ ಆರೋಪಿಯಾದ ನೀವು ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಮದ್ಯ ಸೇವಿಸಲು ಅವಕಾಶ ಮಾಡಿಕೊಟ್ಟು, ಸಾರ್ವಜನಿಕರಿಗೆ ಮದ್ಯವನ್ನು ಕುಡಿಯಲು ಪ್ರಚೋದನೆ ನೀಡಿದ್ದು, ಆ ಮೂಲಕ ಆರೋಪಿಯಾದ ನೀವು ಅಬಕಾರಿ ಕಾಯ್ದೆ ಕಲಂ–15(ಎ) ಮತ್ತು 32(3) ರಂತೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರೆಂದು ನಿಮ್ಮ ಮೇಲೆ ಆಪಾದನೆ ಇದೆ.

ಪ್ರಶ್ನೆ:1– ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನೆಯನ್ನು ಅರ್ಥಮಾಡಿಕೊಂಡಿರುವಿರಾ ?

ಆರೋಪಿಯ ಉತ್ತರಃ

ಪ್ರಶ್ನೆ:2– ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ ?

ಆರೋಪಿಯ ಉತ್ತರಃ

(ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ಆಪಾದನೆಯನ್ನು ಓದಿ ತಿಳಿಸಿ ಹೇಳಲಾಗಿ ಸದರಿ ಆರೋಪಿಯು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತ್ತೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ 17.01.2026

(ಸತೀಶ. ಕೆ.ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ನಂಜನಗೂಡು.

C.C 143/2026

Accused is present.

L/c Sri. SKM has filed vakalath for accused.

The accused submits that she is ready to plead guilty of the offence alleged against her. Hence, plea of the offences U/s.32(3) of Karnataka Excise Act is recorded and the same is read over to the accused. Accused voluntarily pleads guilty. I accept the plea of the accused and proceed to pass the following:-

**ORDER**

Acting U/s.275 of BNSS, the accused is found guilty and she is convicted for the offence punishable U/s.32(3) of Karnataka Excise Act. The accused is sentenced to pay a fine of Rs.1,500/- (Rupees One Thousand Five Hundred only) in default, she shall undergo S.I. for 15 days.

Properties seized in this case are ordered to be returned to the Excise Department for disposal.

For F/orders. Call on 14.03.2026.

Prl.Civil Judge & JMFC,
Nanjangudu.